# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - TUESDAY 13-12-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


**ಮಲೇಶಿಯನ್ ಪಾಮೆಣ್ಣೆ ದರ ಬೇಡಿಕೆ**

ನವೆಂಬರ್ ತಿಂಗಳ ಮಲೇಶಿಯನ್ ಪಾಮೆಣ್ಣೆ ದಾಸ್ತಾನು ಇಳಿಕೆ ಹಾಗೂ ಪರ್ಯಾಯ ಖಾದ್ಯತೈಲ ದರ ಹೆಚ್ಚಳ ಇವುಗಳಿಂದ ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ನಿನ್ನೆ 14/12 ಕ್ಕೆ 3 ಶೇಕಡಾ ಹೆಚ್ಚಳವಾಗಿ ಇಂದು ಆರಂಭದ ವ್ಯವಹಾರದಲ್ಲಿ 1.65 ಶೇಕಡಾ ದರ ಹೆಚ್ಚಳವಾಗಿದೆಯೆನ್ನಲಾಗಿದೆ.

**ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸಕ್ಕರೆ ದರ 1 ತಿಂಗಳ ಗರಿಷ್ಠ ಮಟ್ಟಕ್ಕೇರಿಕೆ**

ಭಾರತ ಹಾಗೂ ಥೈಲಾಂಡ್ ನಿಂದ ಸಕ್ಕರೆ ರಫ್ತು ಇಳಿಕೆಯಾಗುವ ಸೂಚನೆಯಿಂದ ಜಾಗತಿಕ ಸಕ್ಕರೆ ದರ ಹಿಂದಿನ 1 ತಿಂಗಳ ಗರಿಷ್ಠ ಮಟ್ಟಕ್ಕೇರಿಕೆಯಾಗಿದೆಯೆನ್ನಲಾಗಿದೆ. ಸಕ್ಕರೆ ಕಾರ್ಖಾನೆಗಳು ಸಕ್ಕರೆ ರಫ್ತು ಮಾಡಲು ಜಾಗತಿಕ ದರ ಹೆಚ್ಚಳವಾಗಲು ಕಾಯುತ್ತಿದ್ದಾರೆನ್ನಲಾಗಿದೆ.

**ನಿರ್ಬಂಧ ಹೊರತಾಗಿಯೂ ಭಾರತ ಜಾಗತಿಕ ಅತಿ ಹೆಚ್ಚು ಅಕ್ಕಿ ಪೂರೈಕೆದಾರ**

ರಫ್ತು ನಿರ್ಬಂಧ ಹೊರತಾಗಿಯೂ ಭಾರತ ಜಾಗತಿಕ ಅತಿ ಹೆಚ್ಚು ಅಕ್ಕಿ ಪೂರೈಕೆದಾರ ದೇಶವಾಗಿದೆ. ಜಾಗತಿಕ ಅಕ್ಕಿ ಪೂರೈಕೆಯಲ್ಲಿ ಭಾರತ 37.5 ಶೇಕಡಾ ಪಾಲು ಹೊಂದಿದೆ. ಬಾಸ್ಮತಿ ಅಕ್ಕಿ ರಫ್ತಿನಲ್ಲಿ ಭಾರತ 11.11 ಪ್ರಗತಿ ಹಾಗೂ ಬಾಸ್ಮತಿಯೇತರ ಅಕ್ಕಿ ರಫ್ತಿನಲ್ಲಿ 5.6 ಶೇಕಡಾ ಪ್ರಗತಿ ಸಾಧಿಸಿದೆಯೆನ್ನಲಾಗಿದೆ. ರಫ್ತು ಕರ ಹೊರತಾಗಿಯೂ ಇತರ ಜಾಗತಿಕ ರಫ್ತು ದಾರ ದೇಶಗಳ ಅಕ್ಕಿಗಿಂತ ಭಾರತ ಅಕ್ಕಿಯ ರಫ್ತು ದರ ಕಡಿಮೆಯಿದೆಯೆನ್ನಲಾಗಿದೆ.